

ಇದ್ದುಬಿಟ್ಟರೆ ತುಕ್ಕು ಹಿಡಿದು ಹೋಗ್ತೀವಿ ಅಂತ ಬಹಳ ಬೇಗ ಗ್ರಹಿಸಿದರು ಅವರು. ಆ ಅಸಂತೃಪ್ತಿಯನ್ನು ಅವರಲ್ಲಿ ನಾನು ತುಂಬಾ ಸಲ ನೋಡಿದೆ. ಅದು ಕರಿಯರ್‌ಗೆ ಸಂಬಂಧಿಸಿದ ಅಸಂತಪ್ತಿ. ನನ್ನ ಅಸಂತೃಪ್ತಿ ಬೇರೆ. ಅದು ವೃತ್ತಿಗೆ ಸಂಬಂಧಿಸಿದ್ದು.

ಈ ಅಸಂತೃಪ್ತಿಗಳು ಹೀಗಿರುವಾಗಲೇ ಊಹಿಸಿಯೂ ಇರದ ಪ್ರಮಾದವೊಂದು ಬಂದು ಕೂತಿತು. ಮೆಡಿಕಲ್ ಮುಗಿಸಿದವರೆಲ್ಲ ನಮ್ಮ ಹಾಗೇ ಉಪನಗರಗಳಿಗೆ ಬಂದು ಕ್ಲಿನಿಕ್‌ಗಳನ್ನು ತೆರೆದುದರಿಂದಾಗಿ ಲೋಕಲ್ ಆರ್‌ಎಂಪಿಗಳು, ಹಕೀಮ್‌ಗಳು ರಿಟಾಲಿಯೇಷನ್ ಸ್ಟಾರ್ಟ್ ಮಾಡಿದರು. ಉಪನಗರಗಳಲ್ಲಿ ಹಲವು ಕಡೆ ಡಾಕ್ಟರುಗಳನ್ನು ಹಿಡಿದುಕೊಂಡು ಬಡಿದರು. ನಮ್ಮ ಮನೆಯವರನ್ನು ಕೂಡ ಒಂಟಿಯಾಗಿ ಸಿಕ್ಕಾಗ ಮಾರಣಾಂತಿಕವಾಗಿ ಹೊಡೆದುಹಾಕಿದರು. ದಟ್ ವಾಸ್ ಫೈನಲ್. ಇದೆಲ್ಲ ಗೊಡವೆ ಯಾವನಿಗೆ ಬೇಕು, ಹೋಗಿ ಯಾವುದಾದರೂ ದೊಡ್ಡ ಹಾಸ್ಪಿಟಲ್‌ನಲ್ಲಿ ಸೇರಿಕೊಂಡರೆ ಚೆನ್ನಾಗಿರುತ್ತಲ್ವಾ ಅಂದರು ಅವರು. ಅದಕ್ಕೆ ಈಗಿರುವ ಓದು ಸಾಕಾಗುತ್ತೆ. ಆದರೆ ಇನ್ನೂ ಮೇಲೆ ಹೋಗಲು ಸಾಕಾಗಲ್ಲ. ಮೇಲೆ ಹೋಗಬೇಕೆಂದರೆ ಹೈಯರ್ ಎಜುಕೇಷನ್ ಬೇಕು. ಹಾಗಾಗಿ ಅವರು ಪಿಜಿ ಓದಲು ಹೋಗಿಬಿಟ್ಟರು.

ಆಗ ನಾನು ಪ್ರಗ್ನೆಂಟ್ ಆಗಿದ್ದೆ. ಗಂಡು ಮಗುನೋ ಹೆಣ್ಣು ಮಗುನೋ ಹೆತ್ತು ಹಾಯಾಗಿ ಇದ್ದುಬಿಡಬೇಕು ಎಂಬ ಕನಸು ಕಾಣ್ತಾ ಇದ್ದೆ. ಆದರೆ ನನ್ನ ಮನೆಯವರು ಡಿಸಿಷನ್